ಓ:ಎಸ್:ನಂ. *48/2015*

ಪಿ.ಡಬ್ಲ್ಯೂ- *1*

***ದಿಃ 28-07-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ ಆರ್ ಕೆ ವಕೀಲರಿಂದ**

ನಿಪಿ-*34* ರಲ್ಲಿ ನನಗೆ ಸೇರಿದ ಸ್ವತ್ತಿನ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಪಿ-*35* ಮತ್ತು *36* ರ ಎರಡು ದಾಖಲೆಗಳು ಒಂದೇ ಎಂದರೆ ಸರಿಯಲ್ಲ. ನಿಪಿ-*37* ಮತ್ತು ನಿಪಿ-*44* ರ ಎರಡು ದಾಖಲೆಗಳು ಒಂದೇ ಎಂದರೆ ಸರಿ. ನಾನು ನಮ್ಮ ಮನೆಗೆ ವಿದ್ಯುಚ್ಚಕ್ತಿ ಸೌಲಭ್ಯವನ್ನು ಪಡೆದುಕೊಂಡಿಲ್ಲ ಎಂದರೆ ಸರಿ. ನಿಪಿ-*1* ರಿಂದ ನಿಪಿ-*44* ರ ದಾಖಲೆಗಳನ್ನು ಕೃಷ್ಣಪ್ಪನವರು ಅಸಲು ದಾವ ಸಂಖ್ಯೆ *394/2014* ದಾವೆಯನ್ನು ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಹೂಡಿದ ನಂತರ ಸದರಿ ದಾಖಲೆಗಳನ್ನು ಸೃಷ್ಠಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-*38* ರಿಂದ ನಿಪಿ-*41* ರ ಛಾಯಚಿತ್ರಗಳು ಸರ್ವೆ ನಂ.*167* ರ ಜಮೀನಿಗೆ ಸಂಬಂಧಪಟ್ಟಿದ್ದು ಎಂದರೆ ಸರಿಯಲ್ಲ. ನಾನು ಯಾವತ್ತೂ ಸಹ ಸರ್ವೆ ನಂ.*52* ರ ಸರ್ಕಾರಿ ಜಮೀನಿನಲ್ಲಿ ಸಾಗುವಳಿ ಮಾಡುತ್ತಿಲ್ಲದಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ದಾವ ಆಸ್ತಿಯಲ್ಲಿ ಹುಲ್ಲು ಮನೆಯನ್ನು ಕಟ್ಟಿಲ್ಲ ಮತ್ತು ಅಲ್ಲಿ ವಾಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಸರ್ವೆನಂಬರ್ *167* ರ ಗಡಿಯಿಂದ ಎಂ.ಸಿ. ಹಳ್ಳಿಯ ಪಂಚಾಯಿತಿ ರಸ್ತೆಗೆ ಸುಮಾರು *400* ಅಡಿಗಿಂತ ಹೆಚ್ಚು ಅಂತರವಿದೆ ಎಂದರೆ ಇನ್ನು ಹೆಚ್ಚು ಅಂತರವಿದೆ ಎಂದು ಸಾಕ್ಷಿ ಸಾಕ್ಷ್ಯ ನುಡಿಯುತ್ತಾರೆ. ಸರ್ಕಾರಿ ಜಮೀನಿನಲ್ಲಿ ನನಗೆ ಸೇರಿದ ಯಾವುದೇ ನಿವೇಶನ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***